# ನಿಮ್ಮ ಮಕ್ಕಳ ಕೋಣೆ ಹೀಗಿರಲಿ



■ ದಿನೇಶ್ ಸಿ.ಹೆಚ್.

ಕೆಲವೊಂದು ಮನೆಗಳಲ್ಲಿ ಮಕ್ಕಳಿಗೆಂದೇ ರೂಮ್ ನಿರ್ಮಿಸುತ್ತಾರೆ. ಆದರೆ ಅದು ಹೇಗಿರಬೇಕೆಂದು ಹೆಚ್ಚಿನವರಿಗೆ ಗೊಂದಲದ ವಿಚಾರವೇ ಸರಿ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವಂತಹ ರೂಮ್‌ಗಳನ್ನು ನಿರ್ಮಿಸುವುದು ಬಹಳ ಒಳ್ಳೆಯದು. ಇದರಿಂದ ಮಕ್ಕಳು ಎಲ್ಲಾ ರೀತಿಯಲ್ಲೂ ಬೆಳೆವಣಿಗೆ ಹೊಂದಲು ಸಾಧ್ಯ. ನೀವೂ ಮನೆ ಕಟ್ಟಿಸುವಾಗ ಅಥವಾ ರೂಮ್ ನಿರ್ಮಿಸುವಾಗ ಸ್ವಲ್ಪ ನಿಧಾನಕ್ಕೆ ಯೋಚಿಸಿ. ಈ ಕೆಳಗಿನ ಅಂಶಗಳಿ ಈ ವಿಷಯದಲ್ಲಿ ನಿಮಗೆ ನೆರವಾಗಬಹುದು.

★ ಬಣ್ಣಗಳ ಆಯ್ಕೆ

ಗೋಡೆಗಳಿಗೆ ಬಣ್ಣ ಬಳಿಯುವಾಗ ಮಕ್ಕಳ ಅಭಿರುಚಿಯನ್ನು ನೆನಪಿನಲ್ಲಿಡಿ. ಕೆಲವೊಂದು ಬಣ್ಣಗಳು ಮಕ್ಕಳನ್ನು ಪಾಠದ ಕಡೆಗೆ ಅಥವಾ ಓದುವುದರ ಕಡೆಗೆ ಏಕಾಗ್ರತೆ ಹೆಚ್ಚಿಸುವಂತೆ ಮಾಡುವುದಿಲ್ಲ. ಕೆಲವೊಂದು ಬಣ್ಣಗಳು ಅವರ ಏಕಾಗ್ರತೆಗೆ ಭಂಗ ತರುತ್ತವೆ. ಈ ಹಿನ್ನೆಲೆಯಲ್ಲಿ ಗೋಡೆಗಳಲ್ಲಿ ಆದಷ್ಟು ತಿಳಿ ಬಣ್ಣಗಳನ್ನು ಆಯ್ದುಕೊಳ್ಳುವುದು ಉತ್ತಮ. ಉದಾ:– ತಿಳಿನೀಲಿ, ತಿಳಿಗುಲಾಬಿ, ತಿಳಿ ಹಸಿರು, ತಿಳಿ ಹಳದಿ– ಹೀಗೆ ಆದಷ್ಟೂ ಗಾಢ ಬಣ್ಣಗಳಿಂದ ದೂರವಿರಿ.

★ ಗಾಳಿ, ಬೆಳಕು ಚೆನ್ನಾಗಿರಲಿ

ಕೊಠಡಿಗೆ ಆದಷ್ಟೂ ಗಾಳಿ, ಬೆಳಕು ಬರುವಂತಿರಬೇಕು. ಗಾಳಿ, ಬೆಳಕು ಬರುವಂತಹ ದೊಡ್ಡ ಕಿಟಕಿಗಳನ್ನು ಜೋಡಿಸಿದರೆ, ನೈಸರ್ಗಿಕ ಬೆಳಕು ಬೀಳುತ್ತದೆ. ಇದರಿಂದ ಹಗಲು ಹೊತ್ತಿನಲ್ಲಿ ವಿದ್ಯುತ್ ಬಳಸುವುದೂ ತಪ್ಪುತ್ತದೆ. ಕಿಟಕಿಗಳಿಗೆ ಗಾಜನ್ನು ಬಳಸುವುದು ಸೂಕ್ತ. ಕಿಟಕಿಗಳಿಗೆ ದಪ್ಪ ಕರ್ಟನ್ ಹಾಕಿದರೆ ರಾತ್ರಿ ಹೊರಗಿನಿಂದ ಬರುವ ಬೆಳಕು (ಉದಾಹರಣೆಗೆ ಬೀದಿದೀಪ) ಬೀಳುವುದು ತಪ್ಪುತ್ತದೆ. ಅಂತೆಯೇ ಮಳೆಗಾಲದಲ್ಲಿ ಮಿಂಚಿನ ಬೆಳಕು ಬೀಳುವುದಿಲ್ಲ.

★ ಅಲಂಕಾರಿಕ ವಸ್ತುಗಳ ಬಳಕೆ

ಮಕ್ಕಳ ರೂಮಿನಲ್ಲಿ ಫೋಟೋವನ್ನು ತೂಗುಹಾಕುತ್ತೀರಾ? ಎಂತಹ ಫೋಟೋಗಳನ್ನು ತೂಗು ಹಾಕಬೇಕೆಂಬ ಗೊಂದಲ ಸಹಜ. ಮಕ್ಕಳ ಕೊಠಡಿಯಲ್ಲಿ ಮೊದಲು ಪ್ರಕೃತಿಯ ಚಿತ್ರಗಳಿಗೆ ಆದ್ಯತೆ ನೀಡಿ. ಇದರಿಂದ ಮಕ್ಕಳು ಪ್ರಕೃತಿಯ ಬಗ್ಗೆ ಚಿಂತಿಸಲು ಸಾಧ್ಯ. ಫ್ಯಾಮಿಲಿ ಫೋಟೋ ಮತ್ತು ಮಕ್ಕಳಿಗೆ ಇಷ್ಟವಾಗುವ ಫೋಟೋಗಳನ್ನು ತೂಗು ಹಾಕಿ. ಅಂತೆಯೇ ಅವರು ಮರೆಯಲಾಗದ  ಕ್ಷಣಗಳನ್ನು ಕ್ಲಿಕ್ಕಿಸಿರುವ ಚಿತ್ರಗಳನ್ನು ಗೋಡೆಗಳಿಲ್ಲಿ ತೂಗುಹಾಕಿದರೆ ಮಕ್ಕಳ ಮನಸ್ಸು ಸದಾ ಸಂತೋಷವಾಗಿರುತ್ತದೆ. ಮಕ್ಕಳಿಗೆ ಇಷ್ಟವಾಗುವ ಬೇಬಿಡಾಲ್, ಡೋರಮಾನ್, ಚೋಟಾ ಭೀಮ್ ಮತ್ತಿತರ ಕಾರ್ಟೂನ್ / ಫ್ಯಾನ್ಸಿ ಜಗತ್ತಿನ ತಾರೆಯರನ್ನು ಅಲ್ಲಲ್ಲಿ ಇರಿಸಿ. ಅದನ್ನು ನೋಡಿದಾಗ ಅವರಿಗೆ ಒಂಥರಾ ರಿಲಾಕ್ಸ್ ಸಿಗುತ್ತದೆ.

★ ಕಪಾಟು

ಕೋಣೆಯಲ್ಲಿ ಕಪಾಟು ಪ್ರಮುಖ ಪಾತ್ರ ವಹಿಸುತ್ತದೆ. ಯಾಕೆಂದರೆ ಮಕ್ಕಳು ಎಲ್ಲ ಆಟಿಕೆಗಳನ್ನು ಇಷ್ಟಪಡುತ್ತಾರೆ. ಮತ್ತು ಕಥೆ ಪುಸ್ತಕಗಳನ್ನು ಓದುತ್ತಾರೆ. ಆದರೆ ಅವೆಲ್ಲವನ್ನೂ ಆಟ– ಓದು ಸಾಕಾದಾಗ ಅಲ್ಲಲ್ಲಿ ಬಿಸಾಡುತ್ತಾರೆ. ಇದನ್ನು ಎತ್ತಿಡಲು ಒಂದು ಕಪಾಟು ಇದ್ದರೆ ಚೆನ್ನ. ಇದರಿಂದಾಗಿ ಅನೇಕ ಉಪಯೋಗಗಳಿವೆ. ಆಟಿಕೆಗಳನ್ನು ಒಂದೆಡೆ ಇಡಲು ಮತ್ತು ಪುಸ್ತಕಗಳನ್ನು ಇನ್ನೊಂದೆಡೆ ಇಡಲು ಅವರಿಹೆ ಕಲಿಸಿಕೊಟ್ಟಂತಾಗುತ್ತದೆ. ಕಪಾಟು ಎತ್ತರವಾಗಿದ್ದಲ್ಲಿ ಒಂದು ಸ್ಟೂಲ್ ಇರಲಿ. ಅಥವಾ ವಿ ಆಕಾರದ ಪುಟ್ಟ ಏಣಿ ಇರಲಿ. ಇದರಿಂದ ವಸ್ತುಗಳನ್ನು ಕಪಾಟಿನ ಮೇಲಿಡಲು ಅವರಿಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.

★ ರೀಡಿಂಗ್ ಟೇಬಲ್

ಹೌದು, ಮಕ್ಕಳ ರೂಮ್ ಅಂದ ಮೇಲೆ ರೀಡಿಂಗ್ ಟೇಬಲ್ ಇರಲೇಬೇಕು. ರೀಡಿಂಗ್ ಟೇಬಲ್ ಆದಷ್ಟು ಬೆಳಕು ಬರುವ ಕಡೆ ಇದ್ದಲ್ಲಿ ಒಳ್ಳೆಯದು. ಜೊತೆಗೆ ಪೆನ್‌ಸ್ಟ್ಯಾಂಡ್, ಟೇಬಲ್ ಲೈಟ್  ಇದ್ದರೆ ಉತ್ತಮ.